ದಿ:11-05-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ .ಎಸ್.ಎ. ಎಚ್. , ವಕೀಲರಿಂದ ಆರೋಪಿತರ ಪರವಾಗಿ**:

5. ದಿ.05.11.2019 ರಂದು ನಾನು ಸೆನ್. ಪೋಲಿಸ್ ಠಾಣೆಗೆ ಸಿಇಎನ್. ಅಪರಾಧ ಪೋಲಲಿಸ ಠಾಣೆಗೆ ತಲುಪಿದಾಗ ಬೆಳಿಗ್ಗೆ 8 ಗಂಟೆ ಆಗಿತ್ತು. ಈ ಪೋಲಿಸ ಠಾಣೆಯು ವಿದ್ಯಾನಗರ ಪೋಲಿಸ ಠಾಣೆ ಕಪೌಂಡ ಒಳಗಡೆ ಇರತ್ತದೆ ಅಂದರೆ ನಿಜ. ಆ ಸಮಯದಲ್ಲಿ ಒಟ್ಟು 35 ಜನ ಸಿಬ್ಬಂದಿಯವರು ಇದ್ದರು. ಪ್ರತಿಯೊಂದು ಪೋಲಿಸ ಠಾಣೆಗೆ DYSP ಇರತ್ತಾರೆ ಅಂದರೆ ನಿಜ. ಅದೇ ರೀತಿ ಸೆನ್ ಅಪರಾಧ ವಿಭಾಗಕ್ಕೂ ಸಹಿತ DYSP ಇರುತ್ತಾರೆ ಎಂದರೆ ನಿಜ. ನನ್ನ ತಕ್ಷಣ ಮೇಲಾಧೀಕಾರಿ ಅಂದರೆ DYSP. ನಮ್ಮ ಪೋಲಿಸ ಠಾಣೆ ಇಂದ ನೂತನ ಕಾಲೇಜಿಗೆ 1-1.5 ಕಿ.ಮಿ. ಅಂತರ ಇದೆ. ಹಾಗೆ ITI college 2 ಕಿ.ಮಿ. ಅಂತರದಲ್ಲಿ ಇರುತ್ತದೆ. ನಮ್ಮ ಠಾಣೆ ಇಂದ PS office 5 ರಿಂದ 5.5 ಕಿ.ಮಿ. ಅಂತರದಲ್ಲಿ ಇದೆ. ಬಂದ ಮಾಹಿತಿಯನ್ನು station house diary ನಲ್ಲಿ ನಮೂದು ಮಾಡಿದ್ದು ನ್ಯಾಯಲಯಕ್ಕೆ ಹಾಜರು ಪಡಿಸಿದ್ದು ನನಗೆ ನೆನಪಿಲ್ಲ. ಅದರ ಪ್ರತಿಯನ್ನು ತನಿಖಾಧಿಕಾರಿಗೆ ಕೊಟ್ಟಿದ್ದೆ. ಬಂದ ಮಾಹಿತಿಯನ್ನು ನಾನು ಬರವಣಿಗೆಯಲ್ಲಿ ಪಡೆದುಕೊಂಡಿಲ್ಲ. ದೂರಿನೊಂದಿಗೆ ದಾಖಲೆಗಳು ಕೊಟ್ಟಿದ್ದರು ಇಲ್ಲವೋ ನನಗೆ ನೆನಪಿಲ್ಲ. ಪತ್ರಾಂಕಿತ ಅಧಿಕಾರಿಗಳು ಮತ್ತು ಪಂಚರು ನಮ್ಮ ಠಾಣೆಗೆ ಬಂದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ಅವರಿಗೆ ನೋಟಿಸ್ಸನ್ನು ಪೊಲೀಸ್ ಠಾಣೆಯಲ್ಲಿ ಕೊಟ್ಟೆವು. 10.15 ಗಂಟೆಗೆ ಖಾಸಗಿ ಕಾರ್ ಬಂತು. ದಾಳಿ ಮಾಡಲು ಹೋದಾಗ ನಾನು ಸಮವಸ್ತ್ರ ಧರಿಸಿದ್ದೆ. ಸಿಬ್ಬಂದಿಗಳು ಸಾಧಾ ಬಟ್ಟೆಯಲ್ಲಿದ್ದರು. ನಿಂತಿದ್ದ ವ್ಯಕ್ತಿಯಿಂದ 100 ಅಡಿ ಅಂತರದಲ್ಲಿ ನಮ್ಮ ವಾಹನವನ್ನು ನಿಲ್ಲಿಸಿದ್ದೆವು. ನಮ್ಮನ್ನು ನೋಡಿ ವ್ಯಕ್ತಿಯು ದಕ್ಷಿಣ ದಿಕ್ಕಿಗೆ 20-30 ಅಡಿ ದೂರದಲ್ಲಿ ಓಡಿ ಹೋದನು. ಎಲ್ಲಾ ಸಿಬ್ಬಂದಿಗಳು ಅವರನ್ನು ಹಿಂಬಾಲಿಸಿದರು, ಆಗ ಚಾಸಾ-13 ಮತ್ತು 17 ರವರು ಹಿಡಿದುಕೊಂಡರು. ಓಡಿ ಹೋದಂತಹ ವ್ಯಕ್ತಿಯು

ಬ್ರೌನ್ ಕಲರ್ ಶರ್ಟ ಮತ್ತು ಹಸಿರು ಬಣ್ಣದ ಲುಂಗಿ ಹಾಕಿಕೊಂಡಿದ್ದರು. ಅದು ಜನಸಂದಣಿ ಏರಿಯಾ ಅಂದರೆ ನಿಜ. ಆ ಸಮಯದಲ್ಲಿ ವ್ಯಕ್ತಿಯನ್ನು ಹಿಡಿದಾಗ ಅಲ್ಲಿ ಜನರು ಕೂಡಿರಲಿಲ್ಲ. ವಾಪಸ್ಸು ನಾವು ಠಾಣೆಗೆ ಬಂದಿಲ್ಲ ನೇರವಾಗಿ ಆರೋಪಿಯು ಮುಂದಿನ ಸ್ಥಳವು ತೋರಿಸಿದ್ದು, ಅಲ್ಲಿಗೆ ಹೋದೆವು. ವಶಪಡಿಸಿಕೊಂಡಿದ್ದ 150 ಗ್ರಾಂ. ಸೊಪ್ಪಿನ ಬಗ್ಗೆ ತಕ್ಷಣ ಮೇಲಾಧಿಕಾರಿಗಳಾದ Dy.S.P. ರವರಿಗೆ ವರದಿ ಮಾಡಿಲ್ಲ ಠಾಣೆಗೆ ವರದಿ ಮಾಡಿದ್ದೇನೆ. ಮುದೇವರ ಬಸವಣ್ಣ ಇವರ ಜಮೀನಿನಲ್ಲಿ ಆ ಸೊಪ್ಪನ್ನು ತಂದು ಮಾರಾಟ ಮಾಡುತ್ತಿರುವುದಾಗಿ ಆರೋಪಿಯು ಹೇಳಿದ್ದು, ಅದನ್ನು ಸ್ವಇಚ್ಛೆ ಹೇಳಿಕೆಯಲ್ಲಿ ಬರೆದಿದ್ದು ಅದನ್ನು ಪಂಚನಾಮೆಯಲ್ಲಿ ಬರೆದಿದ್ದೇವೆ. ಅದನ್ನು ಕೈ ಬರವಣಿಗೆ ಮಾಡಿಲ್ಲ.

6. ಹರಗನಹಳ್ಳಿಯ ಸರ್ವೆ 23/4 ರಲ್ಲಿ ಶೋಧನೆ ಮಾಡಲು ಶೋಧನಾ ವಾರೆಂಟ್ ನ್ನು ನ್ಯಾಯಾಲಯದಿಂದ ಮತ್ತು ಮೇಲಾಧಿಕಾರಿಗಳಿಂದ ಪಡೆದುಕೊಂಡಿಲ್ಲ. ಸಾಕ್ಷಿದಾರರು ಹೇಳುತ್ತಾರೆ ಆರೋಪಿಯು ವಶದಲ್ಲಿದ್ದಾಗ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರಿಂದ ಪಡೆದುಕೊಂಡಿಲ್ಲ. ಜಮೀನಿಗೆ ಹೋಗುವ ಪೂರ್ವದಲ್ಲಿ ಶೋಧನೆ ವಾರೆಂಟ್ ನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಅಂದರೆ ಕಾಲಾವಕಾಶ ಇರಲಿಲ್ಲ. ಕಾಲಾವಕಾಶ ಇರಲಿಲ್ಲ ಅಂತ ಅದರ ಬಗ್ಗೆ Record of reasons ತಯಾರಿಸಿಲ್ಲ. ಸರ್ವೆ ನಂಬರ 23/4 ರಲ್ಲಿ 02 ಕೆ.ಜಿ. 370 ಗ್ರಾಂ., 01 ಕೆ.ಜಿ. 650 ಗ್ರಾಂ. ತೂಕದ ಹಸಿ ಕಾಂಡ ಮತ್ತು ಬೇರು ವಶಪಡಿಸಿಕೊಂಡಿದ್ದನ್ನು ತಕ್ಷಣ ಮೇಲಾಧಿಕಾರಿಗಳಿಗೆ ಬರವಣಿಗೆಯ ಮೂಲಕ ತಿಳಿಸಿಲ್ಲ, ಮಾಹಿತಿಯನ್ನು ಠಾಣೆಗೆ ತಿಳಿಸಿದ್ದೇನೆ. ಆ ಸೀಲ್ ನ ಮಾದರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ಗೊಬ್ಬರದ ಚೀಲವನ್ನು ರೈತರ ಹತ್ತಿರ ತೆಗೆದುಕೊಂಡಿದ್ದೆವು. ಆ ದಿನ ಮಳೆ ಬಂದಿರಲಿಲ್ಲ. ಸ್ಥಳದಿಂದ ನಾವು ಠಾಣೆಗೆ ವಾಪಸ್ಸು ಹೋದಾಗ ಸಂಜೆ 6.00 ಗಂಟೆ ಆಗಿತ್ತು. ಬಾಡಿಗೆ ಖಾಸಗಿ ಕಾರ್ ನ್ನು ಆ ದಿನ ತೆಗೆದುಕೊಂಡ ಬಗ್ಗೆ ರಶೀದಿ ಏನೂ ಇಲ್ಲ. ನಮ್ಮ ಇಲಾಖಾ ವಾಹನ ಕೆ.ಎ. 17 ಜಿ. 0550 ನೇದರ ದಿಃ 05-11-2019 ರ ಲಾಗ್ ಶಿಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

7. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನಗೆ ಯಾವುದೇ ಬಾತ್ಮಿ ಬಂದಿರಲಿಲ್ಲ ಅಂದರೆ ಸುಳ್ಳು. ನಿಪಿ-2 ನ್ನು ಸುಳ್ಳು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ಆ ದಿನ ನಾನು ಹೇಳಿದ ಆರೋಪಿ ಗಾಂಜಾ ಮಾರಾಟ ಮಾಡಲು ನಿಂತುಕೊಂಡಿರಲಿಲ್ಲ ಮತ್ತು ಆರೋಪಿಯಿಂದ ಯಾವುದೇ ಗಾಂಜಾದ ಸೊಪ್ಪನ್ನು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸುಳ್ಳು. ನಿಪಿ-9 ಮತ್ತು 10 ನ್ನು ಈ ಕೇಸಿಗೊಸ್ಕರ ಸೃಷ್ಟಿಸಿದ್ದು ಇರುತ್ತದೆ ಅಂದರೆ ಸರಿಯಲ್ಲ. ಪಂಚರಿಗೆ ಪೊಲೀಸ್ ಠಾಣೆಯಲ್ಲಿ ಒತ್ತಾಯ ಪಂಚನಾಮೆಗಳಿಗೆ ಸಹಿ ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಸರ್ವೇ ನಂಬರ 23/4 ರಲ್ಲಿ ನಾನುಹೇಳಿದ ರೀತಿಯಲ್ಲಿ ಯಾರೂ ಗಾಂಜಾ ಸೊಪ್ಪು ಬೆಳೆದಿರಲಿಲ್ಲ ಅಂದರೆ ಸುಳ್ಳು. 1 ನೇ ಆರೋಪಿಯು ನಿಪಿ-19 ರಂತೆ ಸ್ವಇಚ್ಛೆ ಹೇಳಿಕೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನಿಗೆ 1 ನೇ ಆರೋಪಿಯು ನಮ್ಮನ್ನು ಕರೆದುಕೊಂಡು ಹೋಗಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಯು ಸರ್ವೇ ನಂಬರ 23/4 ರಲ್ಲಿ ಎಂದಿಗೂ ಸಾಗುವಳಿ ಮಾಡಿಲ್ಲ ಮತ್ತು ಯಾವುದೇ ಬೆಳೆ ಬೆಳೆದಿಲ್ಲ ಅಂದರೆ ಸರಿಯಲ್ಲ. 2 ನೇ ಆರೋಪಿಯು ಸದರಿ ಜಮೀನಿನ ಮಾಲೀಕರು ಇರುವುದಿಲ್ಲ ಮತ್ತು ಸ್ವಾಧೀನದಾರರು ಅಲ್ಲ ಅಂದರೆ ಸುಳ್ಳು. ನಿಜ ಸಂಗತಿಯನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ. ಯಾವುದೇ ಜಮೀನಿನಲ್ಲಿ ಸಾಗುವಳಿ ಮಾಡದೇ ನೈಸರ್ಗಿಕವಾಗಿ ಕೆಲವೊಂದು ಸಸಿಗಳು ಬೆಳೆದಿರುತ್ತವೆ ಅಂದರೆ ಇರಬಹುದು ಆದರೆ ಗಾಂಜಾ ಆ ರೀತಿ ಬೆಳೆಯುವುದಿಲ್ಲ. ಕೆಲವೊಂದು ಪಕ್ಷಿಗಳು ಮತ್ತು ಪ್ರಾಣಿಗಳು ಒಂದು ಪ್ರದೇಶದಿಂದ ಯಾವುದೇ ಸಸ್ಯಗಳ ಹಣ್ಣಗಳನ್ನು ತಿಂದು ಮತ್ತೊಂದು ಪ್ರದೇಶಕ್ಕೆ ಬಂದು ಮಲವಿಸರ್ಜನೆ ಮಾಡಿದಾಗ ಬೀಜ ಪ್ರಸಾರದಿಂದ ಆ ಸಂದರ್ಭದಲ್ಲಿ ಸಸ್ಯಗಳು ಹುಟ್ಟಿಕೊಳ್ಳುವ ಸಾಧ್ಯತೆ ಇರುತ್ತದೆ ಅಂದರೆ ನನಗೆ ಮಾಹಿತಿ ಇಲ್ಲ. ಗಾಳಿಯಿಂದ ಸಹ ಬೀಜದ ಪ್ರಸಾರ ಆಗುತ್ತದೆ ಅಂದರೆ ನನಗೆ ಮಾಹಿತಿ ಇಲ್ಲ.

8. ಸರ್ವೇ ನಂಬರ 23/4 ಕ್ಕೆ ಉತ್ತರಕ್ಕೆ ಇಮಾಮ್ ಸಾಬ್ ರವರ ಜಮೀನು ಇದೆ, ಅಲ್ಲಿ ಸೇವಂತಿಗೆ ಮತ್ತು ಎಲೆ ಬೆಳೆ ಬೆಳೆದಿದ್ದರು. ಆರೋಪಿತರು ಯಾವುದೇ ಅಪರಾಧ ಮಾಡಿಲ್ಲ, ಆರೋಪಿತರಿಗೆ ಆಗದೇ ಇರುವ ವ್ಯಕ್ತಿಗಳ ಮಾತು ಕೇಳಿ ಅವರ ವಿರುದ್ದ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.